ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು

**00/2010**

ಪ್ರಶ್ನೆ ಪುಸ್ತಿಕೆ ಶ್ರೇಣಿ

**C**

# ಪ್ರಶ್ನೆ ಪುಸ್ತಿಕೆ

# ಸಾಮಾನ್ಯ ಅಧ್ಯಯನ

**ಅನುಮತಿಸಲಾದ ಸಮಯ : ಎರಡು ಗಂಟೆ** **ಗರಿಷ್ಠ ಅಂಕಗಳು : 150**

## ಸೂಚನೆಗಳು :

1. ಪರೀಕ್ಷೆ ಪ್ರಾರಂಭಗೊಂಡ ತಕ್ಷಣವೇ ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಶ್ರೇಣಿಯ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. ಪ್ರಶ್ನೆಪುಸ್ತಿಕೆಯ ಶ್ರೇಣಿ **A, B, C** ಅಥವಾ **D** ಯನ್ನು ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್‌ಕೋಡ್) ಗೊಳಿಸಬೇಕು.
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ಸಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೊಂದಣಿ ಸಂಖ್ಯೆ |
|---|
| 402424 |

4. ಈ ಪ್ರಶ್ನೆ ಪುಸ್ತಿಕೆ **150** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು **4** ಉತ್ತರಗಳನ್ನು ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ **ಒಂದು ಉತ್ತರವನ್ನು** ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಹಾಳೆಯ ಮೇಲೆ ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು. ಉತ್ತರ ಹಾಳೆಯಲ್ಲಿನ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ. ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಉತ್ತರ ಹಾಳೆಯಲ್ಲಿ ಉತ್ತರಗಳನ್ನು ಗುರುತಿಸಲು ಪ್ರಾರಂಭಿಸುವ ಮೊದಲು ಪ್ರಶ್ನೆ ಪುಸ್ತಿಕೆಯ ಶ್ರೇಣಿ ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ತಿಳಿಸಿರುವಂತೆ ಕೇಂದ್ರ ಸಂಕೇತ, ಉಪ-ಕೇಂದ್ರ ಸಂಕೇತ ಮತ್ತು ನೋಂದಣಿ ಸಂಖ್ಯೆಗಳನ್ನು (ನಿಮ್ಮ ಸಹಿ ಹಾಗೂ ಸಂವೀಕ್ಷಕರ ಸಹಿಯೊಂದಿಗೆ) ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿ/ಗುರುತು ಮಾಡಿರಿ.
8. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
9. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
10. ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತವೆ. ಕನ್ನಡ ಪ್ರಶ್ನೆಗಳಲ್ಲಿ ಸಂದೇಹ ಉಂಟಾದರೆ, ದಯವಿಟ್ಟು ಆಂಗ್ಲ ಭಾಷೆಯ ಪ್ರಶ್ನೆಗಳನ್ನು ಗಮನಿಸುವುದು.
11. ಯಾವುದೇ ರೀತಿಯ ಕ್ಯಾಲ್‌ಕ್ಯುಲೇಟರ್, ಪೇಜರ್, ಮೊಬೈಲ್ ಫೋನ್ ಅಥವಾ ಯಾವುದೇ ಎಲೆಕ್ಟ್ರಾನಿಕ್ ಉಪಕರಣಗಳನ್ನು ಬಳಸಲು **ಅನುಮತಿಸುವುದಿಲ್ಲ.**
12. ಉತ್ತರ ಹಾಳೆಯಲ್ಲಿ ಕಂಡುಬರುವ ಬಾರ್‌ಕೋಡ್‌ಗಳ ಮೇಲೆ ಯಾವುದೇ ಗುರುತು ಮಾಡತಕ್ಕದ್ದಲ್ಲ.

ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು

***Note :** English version of the instructions is printed on the back cover of this booklet.*

SEAL

www.kpscvaani.com

1. ತಾಳಗುಂದ ಶಾಸನದಲ್ಲಿ, ಯಾರನ್ನು 'ಕದಂಬ ಕುಟುಂಬದ ಭೂಷಣ' ಎಂದು ಕರೆಯಲಾಗಿದೆ ?

(1) ಮೌರ್ಯ ಶರ್ಮ

(2) ಕಾಕುಸ್ಥ ವರ್ಮ

(3) ಶಾಂತಿ ವರ್ಮ

(4) ಮೃಗೇಶ ವರ್ಮ

2. ಶ್ರವಣ ಬೆಳಗೊಳದಲ್ಲಿರುವ ಗೊಮ್ಮಟೇಶ್ವರ ವಿಗ್ರಹಕ್ಕೆ ಸಂಬಂಧಿಸಿದಂತೆ ಯಾವ ವಿವರಣೆ **ತಪ್ಪಾಗಿದೆ**, ಆಯ್ಕೆಮಾಡಿ

(1) ಈ ವಿಗ್ರಹವು ಕಮಲದ ಮೇಲೆ ನಿಂತಿದೆ.

(2) ಇದನ್ನು ಕ್ರಿ.ಶ. 982 – 83 ರಲ್ಲಿ ಸ್ಥಾಪಿಸಲಾಯಿತು.

(3) ಇದನ್ನು ಜಿನದೇವನು ಸ್ಥಾಪಿಸಿದನು.

(4) ಈ ಏಕಶಿಲಾವಿಗ್ರಹದ ಆನಂತರದ ಮತ್ತು ಚಿಕ್ಕದಾದ ಅನುಕರಣಗಳು ಕಾರ್ಕಳ, ವೇಣುರು ಮತ್ತು ಧರ್ಮಸ್ಥಳಗಳಲ್ಲಿವೆ.

3. '*ಗದ್ಯಕರ್ಣಾಮೃತ*' ಎನ್ನುವುದು ಈ ಕೆಳಕಂಡ ಅಧ್ಯಯನಕ್ಕೆ ಬಹುಮುಖ್ಯವಾದ ಆಕರ ಸಾಮಗ್ರಿಯಾಗಿದೆ

(1) ತರುವಾಯದ ವರ್ಷಗಳಲ್ಲಿ ಹೊಯ್ಸಳ-ಪಾಂಡ್ಯ ಸಂಬಂಧಗಳು.

(2) ಆರಂಭಕಾಲದಲ್ಲಿ ಚೋಳ-ಪಲ್ಲವ ಸಂಬಂಧಗಳು

(3) ಚಾಲುಕ್ಯ-ರಾಷ್ಟ್ರಕೂಟ ಸಂಬಂಧಗಳು

(4) ಮೇಲಿನ ಯಾವುದೂ ಅಲ್ಲ

4. ಸುಲ್ತಾನಾ ರಜಿಯಾ ಯಾವ ರಾಜವಂಶಕ್ಕೆ ಸೇರಿದವಳು ?

(1) ತುಘಲಕ್

(2) ಗುಲಾಮಿ (ಸ್ಲೇವ್)

(3) ಖಿಲ್ಜಿ

(4) ಲೋದಿ

5. ಜಹಂಗೀರನ ಆಸ್ಥಾನಕ್ಕೆ ಭೇಟಿ ನೀಡಿದ ಬ್ರಿಟನ್ ರಾಜಮನೆತನದ ರಾಯಭಾರಿಯ ಹೆಸರು

(1) ಥಾಮಸ್ ಮನ್ರೊ

(2) ಬೆಂಜಮಿನ್ ರೈಸ್

(3) ಥಾಮಸ್ ರೋ.

(4) ಈ ಮೇಲಿನ ಯಾರೂ ಅಲ್ಲ

6. ಪಟ್ಟಿ I ರಲ್ಲಿ ಕೃತಿಕಾರರ ಹೆಸರುಗಳಿವೆ ಮತ್ತು ಪಟ್ಟಿ II ರಲ್ಲಿ ಕೃತಿಯ ಶೀರ್ಷಿಕೆಗಳಿವೆ. ಇವುಗಳ ಸರಿಯಾದ ಹೊಂದಾಣಿಕೆಯನ್ನು ಗುರುತಿಸಿ.

| *ಪಟ್ಟಿ I* | *ಪಟ್ಟಿ II* |
|---|---|
| A. ದಾದಾಭಾಯ್ ನವರೋಜಿ | 1. *ಹಿಂದ್ ಸ್ವರಾಜ್* |
| B. ಬಾಲ್ ಗಂಗಾಧರ ತಿಲಕ್ | 2. *ಗಾಂಧಿ ಆಂಡ್ ಅನಾರ್ಕಿ* |
| C. ಸರ್ ಸಿ. ಶಂಕರನ್ ನಾಯರ್ | 3. *ಗೀತಾ-ರಹಸ್ಯ* |
| D. ಎಂ.ಕೆ. ಗಾಂಧಿ | 4. *ಪವರ್ಟಿ ಅಂಡ್ ಅನ್-ಬ್ರಿಟಿಷ ರೂಲ್ ಇನ್ ಇಂಡಿಯಾ* |

**ಸಂಕೇತಗಳು :**

| | A | B | C | D |
|---|---|---|---|---|
| (1) | 3 | 1 | 4 | 2 |
| (2) | 4 | 3 | 2 | 1 |
| (3) | 1 | 2 | 3 | 4 |
| (4) | 4 | 3 | 1 | 2 |



www.kpscvaani.com

1. Who was called 'the ornament of Kadamba family' in the Talagunda inscription ?

(1) Mayura Sharma
(2) Kakustha Varma
(3) Shanti Varma
(4) Mrigesha Varma

2. Select the ***incorrect*** statement about the Gomateshwara statue at Shravanabelagola.

(1) The image stands on a lotus.
(2) It was installed in 982 – 83 A.D.
(3) It was installed by Jinadeva.
(4) The monolith has its later and smaller imitations at Karkala, Venur and Dharmasthala.

3. *Gadyakarnamritha* is an important source material for the study of

(1) Hoysala-Pandya relations in the later years
(2) Chola-Pallava relations in the early period
(3) Chalukya-Rastrakuta relations
(4) None of the above

4. To which dynasty did Sultana Razia belong ?

(1) Tughlaq
(2) Slave
(3) Khalji
(4) Lodi

5. Name the royal ambassador of Britain who visited the court of Jahangir.

(1) Thomas Munro
(2) Benjamin Rice
(3) Thomas Roe
(4) None of the above

6. Match List I (Names of authors) with List II (The titles of their works) and select the correct answer using the codes given below the lists :

| *List I* | *List II* |
|---|---|
| A. Dadabhai Naoroji | 1. *Hind Swaraj* |
| B. Bal Gangadhar Tilak | 2. *Gandhi and Anarchy* |
| C. Sir C. Sankaran Nair | 3. *Gita-rahasya* |
| D. M.K. Gandhi | 4. *Poverty and Un-British Rule in India* |

**Codes :**

| | A | B | C | D |
|---|---|---|---|---|
| (1) | 3 | 1 | 4 | 2 |
| (2) | 4 | 3 | 2 | 1 |
| (3) | 1 | 2 | 3 | 4 |
| (4) | 4 | 3 | 1 | 2 |



www.kpscvaani.com

7. ಈ ಕೆಳಗಿನ ಯಾವ ಎ.ಐ.ಸಿ.ಸಿ. ಅಧಿವೇಶನದಲ್ಲಿ ಜವಹರಲಾಲ್ ನೆಹರೂ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಮೋತಿಲಾಲ್ ನೆಹರೂ ಅವರ ತರುವಾಯದ ಅಧ್ಯಕ್ಷರಾಗಿ ಆಯ್ಕೆಯಾದರು

(1) ಲಾಹೋರ್

(2) ಅಮೃತಸರ್

(3) ಪಾಟಿಯಾಲಾ

(4) ತ್ರಿಪುರಾ

8. ಈ ಕೆಳಗಿನವುಗಳನ್ನು ಚಾರಿತ್ರಿಕ ಕಾಲಾನುಕ್ರಮದಲ್ಲಿ ತಿಳಿಸಿ :

I. ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ

II. ಮಲಬಾರ್ ಪ್ರತಿಭಟನೆ

III. ಕೊಮಗಟ ಮಾರು ಘಟನೆ

IV. ಆರ್.ಐ.ಎನ್. ದಂಗೆ

ಸರಿಯಾದ ಅನುಕ್ರಮಣಿಕೆ :

(1) III, I, II, IV

(2) IV, III, II, I

(3) I, III, II, IV

(4) IV, II, III, I

9. ಭಾರತದ ಏಕೀಕರಣ ಕಾರ್ಯದಲ್ಲಿ ಸರ್ದಾರ್ ಪಟೇಲರಿಗೆ ಅತ್ಯಂತ ನಿಕಟವರ್ತಿಯಾಗಿದ್ದವರು

(1) ವಿ.ಪಿ. ಮೆನನ್

(2) ಕೆ.ಪಿ.ಎಸ್. ಮೆನನ್

(3) ಸರ್ ಸಿ. ಶಂಕರನ್ ನಾಯರ್

(4) ಎಂ.ಓ. ಮಥಾಯಿ

10. ಜವಹರಲಾಲ್ ನೆಹರೂ ಅವರು ನ್ಯಾಯವಾದಿಯ ಕೋಟನ್ನು ಕೊನೆಯ ಬಾರಿಗೆ ಧರಿಸಿದ್ದು ಯಾವ ಸಂದರ್ಭದಲ್ಲಿ ?

(1) ಮಹಾತ್ಮ ಗಾಂಧಿಯವರ ವಿಚಾರಣೆ

(2) ಆರ್.ಐ.ಎನ್. ದಂಗೆಕೋರರ ವಿಚಾರಣೆ

(3) ಐ.ಎನ್.ಎ. ಬಂದಿಗಳ ವಿಚಾರಣೆ

(4) ಭಗತ್ ಸಿಂಗ್ ಪ್ರಕರಣದ ಪ್ರಿವಿ ಕೌನ್ಸಿಲ್ ಹಿಯರಿಂಗ್

11. ದೇಶೀಯ ಭಾಷೆಗಳ ಪತ್ರಿಕಾ ಕಾಯ್ದೆಯನ್ನು 1878 ರಲ್ಲಿ ಜಾರಿಗೊಳಿಸಿದವರು

(1) ಲಾರ್ಡ್ ರಿಪ್ಪನ್

(2) ಲಾರ್ಡ್ ಲಿಟ್ಟನ್.

(3) ಲಾರ್ಡ್ ಕರ್ಜನ್

(4) ಮೇಲಿನ ಯಾರೂ ಅಲ್ಲ

12. ಈ ಕೆಳಗಿನ ಯಾವ ಸೌಮ್ಯವಾದಿಯನ್ನು high priest of Drain Theory ಎಂದು ಪರಿಗಣಿಸಲಾಗಿದೆ ?

(1) ದಿನ್‌ಶಾ ವಚ್ಛಾ

(2) ಆರ್.ಪಿ. ದತ್

(3) ಗೋಪಾಲ ಕೃಷ್ಣ ಗೋಖಲೆ

(4) ದಾದಾಭಾಯ್ ನವರೋಜಿ.



www.kpscvaani.com

7. In which of the following AICC sessions did Jawaharlal Nehru succeed Motilal Nehru as President of the Indian National Congress ?

(1) Lahore

(2) *Amritsar*

(3) Patiala

(4) Tripura

8. Arrange the following in chronological order :

I. Massacre at Jallianwallah Bagh

II. Malabar Rebellion

III. *Komagata Maru* Episode

IV. RIN Mutiny

The correct order is

(1) III, I, II, IV

(2) IV, III, II, I

(3) I, III, II, IV

(4) IV, II, III, I

9. Who among the following was the closest associate of Sardar Patel in the Unification of India ?

(1) V.P. Menon

(2) K.P.S. Menon

(3) Sir C. Sankaran Nair

(4) M.O. Mathai

10. The last time Jawaharlal Nehru donned the lawyer's coat was during

(1) the trial of Mahatma Gandhi

(2) the trial of RIN mutineers

(3) the trial of INA prisoners

(4) the Privy Council hearing of Bhagat Singh case

11. Who passed the Vernacular Press Act in 1878 ?

(1) Lord Ripon

(2) Lord Lytton

(3) Lord Curzon

(4) None of the above

12. Who among the following moderates is considered as the high priest of the Drain Theory ?

(1) Dinshaw Wachcha

(2) R.P. Dutt

(3) Gopal Krishna Gokhale

(4) Dadabhai Naoroji



www.kpscvaani.com

13. ಭಾರತದಲ್ಲಿ ಹೋಂರೂಲ್ ಚಳುವಳಿಯು ಇಳಿಮುಖವಾಗುವುದಕ್ಕೆ ಈ ಕೆಳಗಿನ ಯಾವುದು ಅತಿಮುಖ್ಯ ಕಾರಣವಾಯಿತು ?

(1) ಮಾಂಟೆಗ್ಯು-ಚೆಲ್ಮ್ಸ್‌ಫರ್ಡ್ ಸುಧಾರಣೆಗಳ ಯೋಜನೆಯನ್ನು ಪ್ರಕಟಿಸಿದ್ದು.

(2) ಆ್ಯನಿ ಬೆಸೆಂಟ್ ಅವರ ಬಂಧನ

(3) ಲೀಗ್‌ನ ಸದಸ್ಯರಾಗಿ ಸೌಮ್ಯವಾದಿಗಳನ್ನು ನೋಂದಾಯಿಸಿಕೊಂಡಿದ್ದು

(4) ಲೋಕಮಾನ್ಯ ತಿಲಕರಿಂದ ಹೋಂರೂಲ್ ಚಳುವಳಿಯ ಸ್ಥಾಪನೆ

14. ಗಾಂಧಿಯವರಿಗೆ ಕೈಸರ್-ಇ-ಹಿಂದ್ ಪ್ರಶಸ್ತಿಯ ಗೌರವವನ್ನು ಬ್ರಿಟಿಷರು ನೀಡಿದ್ದೇಕೆ ?

(1) ಅವರು ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹವನ್ನು ನಡೆಸಿದ್ದಕ್ಕೆ

(2) ಬ್ರಿಟಿಷರ ಕೋರಿಕೆಯ ಮೇರೆಗೆ ಅವರು ದಕ್ಷಿಣ ಅಫ್ರಿಕಾವನ್ನು ಬಿಟ್ಟು ಬಂದಿದ್ದಕ್ಕೆ

(3) ಮೊದಲ ಮಹಾಯುದ್ಧದಲ್ಲಿ ಗಾಂಧಿಯವರು ಬ್ರಿಟಿಷರಿಗೆ ಸಹಾಯ ಮಾಡಿದ್ದಕ್ಕೆ.

(4) ಅಸಹಕಾರ ಚಳುವಳಿಯನ್ನು ನಿಲ್ಲಿಸಿದ್ದಕ್ಕೆ.

15. ಪ್ರಸಿದ್ಧವಾದ ದಂಡಿಯಾತ್ರೆಗೆ ಸಬರಮತಿ ಆಶ್ರಮದ ಎಷ್ಟು ಮಂದಿಯನ್ನು ಗಾಂಧಿಯವರು ಸೇರಿಸಿಕೊಂಡರು ?

(1) 72

(2) 200

(3) 78

(4) 220

16. ಡೋಲ್‌ಡ್ರಮ್ಸ್ ಎಂದರೇನು ?

(1) ವಾಣಿಜ್ಯ ಮಾರುತಗಳ ವಲಯ

(2) ಅತ್ಯಧಿಕ ಆರ್ದ್ರತೆಯ ವಲಯ

(3) ಭೂಮಧ್ಯ ರೇಖೆಯುದ್ದಕ್ಕೂ ಇರುವ ಕಡಿಮೆ ಒತ್ತಡದ ಪ್ರದೇಶ.

(4) ಧ್ರುವೀಯ ಕಡಿಮೆ ಒತ್ತಡದ ಪ್ರದೇಶ

17. ನಂದಾದೇವಿ ಶಿಖರ ಯಾವ ರಾಜ್ಯದಲ್ಲಿದೆ ?

(1) ಜಮ್ಮೂ ಮತ್ತು ಕಾಶ್ಮೀರ

(2) ಹಿಮಾಚಲ ಪ್ರದೇಶ

(3) ಉತ್ತರಾಂಚಲ.

(4) ಪಂಜಾಬ್

18. 'ಲಡಾಂಗ್' ಎನ್ನುವುದು

(1) ಇಂಡೋನೇಶಿಯಾದಲ್ಲಿ ಕಂಡುಬರುವ ಒಂದು ಬುಡಕಟ್ಟು

(2) ಮಲೇಶಿಯಾದಲ್ಲಿ ಕಂಡುಬರುವ ಒಂದು ಬುಡಕಟ್ಟು

(3) ಮಲೇಶಿಯಾದ ಕದಲು ಬೇಸಾಯ

(4) ಇಂಡೋನೇಶಿಯಾದ ಕದಲು ಬೇಸಾಯ

19. 'ಮಾವುನಾ ಲೋಯಾ' ಎಂಬುದು

(1) ಜೀವಂತ ಜ್ವಾಲಾಮುಖಿಗೆ ಉದಾಹರಣೆ

(2) ಸುಪ್ತ ಜ್ವಾಲಾಮುಖಿಗೆ ಉದಾಹರಣೆ.

(3) ಅವಸಾನ ಜ್ವಾಲಾಮುಖಿಗೆ ಉದಾಹರಣೆ

(4) ಒಂದು ಜ್ವಾಲಾಮುಖಿಯ ಪ್ರದೇಶದಲ್ಲಿರುವ ಪೀಠಭೂಮಿಗೆ (Plateau) ಉದಾಹರಣೆ

20. ಗಾಬ್ರೊ ಎನ್ನುವುದು

(1) ಅಗ್ನಿಶಿಲೆಗಳಿಗೆ ಉದಾಹರಣೆ

(2) ಜಲಜ ಶಿಲೆಗಳಿಗೆ ಉದಾಹರಣೆ.

(3) ರೂಪಾಂತರಿ ಶಿಲೆಗಳಿಗೆ ಉದಾಹರಣೆ

(4) ಇದ್ಯಾವುದೂ ಅಲ್ಲ



www.kpscvaani.com

13. Which among the following became the main cause for the decline of Home Rule Movement in India ?

(1) Publication of scheme of Montagu-Chelmsford Reforms

(2) Arrest of Annie Besant

(3) Enrolment of moderates as members of the League

(4) Home Rule Movement established by Lokmanya Tilak

14. Why was Gandhi honoured with the Kaiser-i-Hind award by the British ?

(1) For his Satyagraha in South Africa

(2) For leaving South Africa at the request of the British

(3) Gandhi helped the British during the First World War

(4) For the suspension of Non-Cooperation Movement

15. How many members of Sabarmati Ashram were included by Gandhi for the famous Dandi March ?

(1) 72

(2) 200

(3) 78

(4) 220

16. What are Doldrums ?

(1) Trade wind region

(2) Great humidity region

(3) A low pressure belt along the Equator

(4) Polar low pressure area

17. In which state is Nanda Devi peak situated ?

(1) Jammu & Kashmir

(2) Himachal Pradesh

(3) Uttaranchal

(4) Punjab

18. 'Ladang' is

(1) a tribe found in Indonesia

(2) a tribe found in Malaysia

(3) shifting cultivation in Malaysia

(4) shifting cultivation in Indonesia

19. 'Mauna Loa' is an example of

(1) Active volcano

(2) Dormant volcano

(3) Extinct volcano

(4) Plateau in a volcanic region

20. Gabbro is an example of

(1) Igneous rocks

(2) Sedimentary rocks

(3) Metamorphic rocks

(4) None of these



www.kpscvaani.com

21. ಈ ಕೆಳಗಿನ ಯಾವುದು ಶೀತಪ್ರವಾಹ ?

(1) ಗಲ್ಫ್ ಸ್ಟ್ರೀಮ್

(2) ಅಗಲ್ಹಾಸ್ ಪ್ರವಾಹಗಳು

(3) ಓಕೋಟ್‌ಸ್ಕ್ ಪ್ರವಾಹ

(4) ಕುರೊಶಿಯೋ ಪ್ರವಾಹ

22. ಅವಸಾನಗೊಂಡಿರುವ ಅಥವಾ ಸುಪ್ತಾವಸ್ಥೆಯಲ್ಲಿರುವ ಅತಿ ದೊಡ್ಡ ಜ್ವಾಲಾಮುಖೀಯ ಪರ್ವತ ಯಾವುದು ?

(1) ಕಿಲಿಮಂಜಾರೋ

(2) ಕೊಟೊಪಾಕ್ಸಿ

(3) ಫ್ಯೂಜಿಯಾಮಾ

(4) ಅಕೊಂಕಾಗುವಾ

23. ಭೂಮಿಯ ಮೇಲ್ಮೈಗೆ ಹತ್ತಿರವಾಗಿರುವ ವಾತಾವರಣ ವಲಯದಿಂದಾರಂಭಿಸಿ ಅತ್ಯಂತ ದೂರವಾಗಿರುವ ವಲಯದವರೆಗೆ ವಾತಾವರಣದ ವಲಯಗಳ ಕ್ರಮವಾದ ವ್ಯವಸ್ಥೆಯನ್ನು ಪ್ರತಿನಿಧಿಸುವ ಸರಿಯಾದ ಉತ್ತರವನ್ನು ಆಯ್ಕೆಮಾಡಿ

I. ಸ್ಟ್ರಾಟೋಸ್ಫಿಯರ್

II. ಟ್ರೋಪೋಸ್ಫಿಯರ್

III. ಅಯಾನೋಸ್ಫಿಯರ್

IV. ಮಿಸೋಸ್ಫಿಯರ್

(1) I, II, III, IV

(2) II, I, III, IV

(3) III, I, IV, II

(4) II, I, IV, III

24. ಆಕಾಶದಲ್ಲಿ ಮೋಡವಿಲ್ಲದಾಗ ಇರುವುದಕ್ಕಿಂತ ಮೋಡವಿರುವಂತಹ ರಾತ್ರಿಗಳು ಹೆಚ್ಚು ತಾಪಯುಕ್ತವಾಗಿರುತ್ತವೆ ಏಕೆಂದರೆ

(1) ಹಸಿರುಮನೆ ಪರಿಣಾಮ

(2) ಭೂಪ್ರದೇಶದ ವಿಕಿರಣ

(3) ಇನ್ಸೊಲೇಶನ್ (ಆತಪನ)

(4) ಅಲ್ಟ್ರಾವಾಯ್ಲೆಟ್ ಕಿರಣಗಳು

25. ಈ ಕೆಳಗಿನ ಯಾವ ದೇಶಗಳು ಕಡಲುಗಳ್ಳತನದ ಗಲಭೆಯಲ್ಲಿ ಸೇರಿಕೊಂಡಿವೆ ಎಂಬ ಆರೋಪಕ್ಕೊಳಗಾಗಿವೆ ?

(1) ನೈಜೀರಿಯಾ

(2) ಇಥಿಯೋಪಿಯಾ

(3) ಸೊಮಾಲಿಯಾ

(4) ಸೂಡಾನ್

26. ಈ ಕೆಳಗಿನ ಯಾವ ರಾಜ್ಯವು ಭೂವೇಷ್ಟಿತವಾಗಿದೆ (land-locked) ?

(1) ಕೇರಳ

(2) ತಮಿಳು ನಾಡು

(3) ಕರ್ನಾಟಕ

(4) ರಾಜಸ್ಥಾನ

27. ಅಂತರರಾಜ್ಯ ನದಿ ನೀರಿನ ವಿವಾದದಲ್ಲಿ ಸೇರಿಕೊಂಡಿರುವ ನದೀತೀರದ ಯಜಮಾನ ರಾಜ್ಯಗಳು ಯಾವುದು ?

(1) ರಾಜಸ್ಥಾನ ಮತ್ತು ಹಿಮಾಚಲ ಪ್ರದೇಶ

(2) ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ

(3) ಆಂಧ್ರ ಪ್ರದೇಶ ಮತ್ತು ಕರ್ನಾಟಕ

(4) ಮಧ್ಯ ಪ್ರದೇಶ ಮತ್ತು ಜಾರ್ಖಂಡ್



www.kpscvaani.com

21. Which of the following is a cold current ?

(1) Gulf Stream

(2) Agulhas Current

(3) Okhotsk Current

(4) Kuroshio Current

22. The highest volcanic mountain whether extinct or dormant is

(1) Kilimanjaro

(2) Cotopaxi

(3) Fujiyama

(4) Aconcagua

23. Choose the order that represents the arrangement of atmospheric zones from closest to farthest from the surface of the Earth.

I. Stratosphere

II. Troposphere

III. Ionosphere

IV. Mesosphere

(1) I, II, III, IV

(2) II, I, III, IV

(3) III, I, IV, II

(4) II, I, IV, III

24. The nights are warmer when the sky is cloudy than when the sky is clear because of

(1) Greenhouse effect

(2) Terrestrial Radiation

(3) Insolation

(4) Ultraviolet rays

25. Which of the following countries is allegedly involved in a spate of ocean piracy ?

(1) Nigeria

(2) Ethiopia

(3) Somalia

(4) Sudan

26. Which of the following is a land-locked state ?

(1) Kerala

(2) Tamil Nadu

(3) Karnataka

(4) Rajasthan

27. The riparian states involved in inter-state river disputes are

(1) Rajasthan and Himachal Pradesh

(2) Uttar Pradesh and West Bengal

(3) Andhra Pradesh and Karnataka

(4) Madhya Pradesh and Jharkhand



www.kpscvaani.com

**28.** ಈ ಕೆಳಗಿನ ವಿವರಣೆಗಳನ್ನು ಗಮನಿಸಿ, ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿ ಉತ್ತರವನ್ನು ಆಯ್ಕೆಮಾಡಿ.

I. ಎಲ್ಲ ಜಲಜ ಶಿಲೆಗಳೂ ಒಂದು ಕಾಲದಲ್ಲಿ ಸಮುದ್ರದ ತಳದಲ್ಲಿದ್ದವು.

II. ಕೆಲವು ಜಲಜ ಶಿಲೆಗಳು ಒಂದು ಕಾಲದಲ್ಲಿ ಸಮುದ್ರ ತಳದಲ್ಲಿದ್ದವು.

III. ಯಾವ ಜಲಜ ಶಿಲೆಗಳೂ ಯಾವ ಕಾಲದಲ್ಲೂ ಸಮುದ್ರ ತಳದಲ್ಲಿರಲಿಲ್ಲ.

IV. ಎಲ್ಲ ಅಗ್ನಿಶಿಲೆಗಳೂ ಒಂದು ಕಾಲದಲ್ಲಿ ಸಮುದ್ರ ತಳದಲ್ಲಿದ್ದವು.

(1) I ಮಾತ್ರ ಸರಿಇದೆ

(2) II ಮಾತ್ರ ಸರಿಇದೆ

(3) III ಮತ್ತು IV ಸರಿ ಇವೆ

(4) III ಮಾತ್ರ ಸರಿ ಇದೆ

**29.** ಉತ್ತರ ಗೋಳಾರ್ಧದಲ್ಲಿ ಗಾಳಿಯ ದಿಕ್ಕು ಬಲಕ್ಕೆ ವಿಕ್ಷೇಪಣಗೊಳ್ಳುತ್ತದೆ. ಕಾರಣ ವೇನು ?

(1) ಭೂಮಿಯ ಪರಿಭ್ರಮಣ

(2) ಭೂಮಿಯ ಅಕ್ಷದ ಬಾಗುವಿಕೆ

(3) ಸೂರ್ಯನ ಸುತ್ತ ಭೂಮಿಯ ಪರಿಕ್ರಮಣ

(4) ಚಂದ್ರನ ಗುರುತ್ವಾಕರ್ಷಣ ಬಲ

**30.** ಅಧಿಕ ಉಬ್ಬರ ವಿಳಿತವು

(1) ಪ್ರತಿ 24 ಗಂಟೆಗಳಗೊಮ್ಮೆ ಉಂಟಾಗುತ್ತದೆ

(2) ಪ್ರತಿ 12 ಗಂಟೆಗಳಗೊಮ್ಮೆ ಉಂಟಾಗುತ್ತದೆ

(3) ಪ್ರತಿ 6 ಗಂಟೆಗಳಗೊಮ್ಮೆ ಉಂಟಾಗುತ್ತದೆ

(4) ಪ್ರತಿ 8 ಗಂಟೆಗಳಗೊಮ್ಮೆ ಉಂಟಾಗುತ್ತದೆ

**31.** ಭಾರತದ ಸಂವಿಧಾನ ನಿರ್ಮಾಪಕರು ಸಂಸದೀಯ ಪ್ರಜಾಪ್ರಭುತ್ವ ಮತ್ತು ದ್ವಿಸದನಗಳ ವ್ಯವಸ್ಥೆಯ ಪರಿಕಲ್ಪನೆಗಳನ್ನು ಯಾವ ವಿದೇಶದ ಸಂವಿಧಾನದಿಂದ ಎರವಲು ಪಡೆದಿದ್ದಾರೆ ?

(1) ಅಮೆರಿಕಾದ ಸಂವಿಧಾನ

(2) ಬ್ರಿಟಿಷ್ ಸಂವಿಧಾನ

(3) ಐರಿಶ್ ಸಂವಿಧಾನ

(4) ಫ್ರೆಂಚ್ ಸಂವಿಧಾನ

**32.** ಕೊಡಗು, ಭಾರತದ ಸಿ ಭಾಗದ ರಾಜ್ಯವಾಗಿದ್ದಾಗ, 1952 – 1956ರ ವರೆಗೆ ಕೊಡಗು ರಾಜ್ಯದ ಮುಖ್ಯ ಮಂತ್ರಿಯಾಗಿದ್ದವರು

(1) ಕೆ. ಮಲ್ಲಪ್ಪ

(2) ಬಿ.ಎಸ್. ಕುಶಾಲಪ್ಪ

(3) ಸಿ.ಎಂ. ಪೂಣಚ್ಚ

(4) ದಯಾ ಸಿಂಗ್ ಬೇಡಿ

**33.** ರಾಷ್ಟ್ರಪತಿ ಆಡಳಿತವನ್ನು ಮೊತ್ತ ಮೊದಲ ಬಾರಿಗೆ ಮೈಸೂರು ರಾಜ್ಯದಲ್ಲಿ (ಕರ್ನಾಟಕ) ವಿಧಿಸಿದ ವರ್ಷ ಯಾವುದು ?

(1) 1969 (2) 1970

(3) 1971 (4) 1973

**34.** ಈ ಕೆಳಗಿನ ಯಾವ ರಾಜ್ಯಗಳ ಗುಂಪಿನಲ್ಲಿ ಎರಡು ಸದನಗಳುಳ್ಳ, ಅಂದರೆ ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳಿರುವ ದ್ವಿಸದನ ಶಾಸನ ಸಭೆ ಇದೆ ?

(1) ಕ್ರನಾಟಕ, ಪಶ್ಚಿಮ ಬಂಗಾಳ, ತಮಿಳ ನಾಡು, ಬಿಹಾರ ಮತ್ತು ಮಹರಾಷ್ಟ್ರ

(2) ಮಹರಾಷ್ಟ್ರ, ಕರ್ನಾಟಕ, ಜಮ್ಮು ಮತ್ತು ಕಾಶ್ಮೀರ, ಬಿಹಾರ್, ಉತ್ತರ ಪ್ರದೇಶ ಮತ್ತು ಆಂಧ್ರ ಪ್ರದೇಶ

(3) ಅರುಣಾಚಲ ಪ್ರದೇಶ, ಕರ್ನಾಟಕ, ಮಹರಾಷ್ಟ್ರ, ಹರಿಯಾಣ, ಜಾರ್ಖಂಡ್ ಮತ್ತು ಕೇರಳ

(4) ಅಸ್ಸಾಂ, ಹರಿಯಾಣ, ಮಹರಾಷ್ಟ್ರ, ಆಂಧ್ರ ಪ್ರದೇಶ, ಕರ್ನಾಟಕ ಹಾಗೂ ಜಮ್ಮು ಮತ್ತು ಕಾಶ್ಮೀರ



www.kpscvaani.com

28. Consider the following statements and choose the correct answer given below the statements :

I. All sedimentary rocks were at one time under the sea.

II. Some sedimentary rocks were at one time under the sea.

III. No sedimentary rocks were ever under the sea.

IV. All igneous rocks at one time were under the sea.

(1) Only I is correct
(2) Only II is correct
(3) III and IV are correct
(4) Only III is correct

29. Wind direction gets deflected to the right in the northern hemisphere because of

(1) rotation of the Earth
(2) inclination of the Earth's axis
(3) revolution of the Earth around the sun
(4) gravitational force of the Moon

30. High tide occurs once

(1) every 24 hours
(2) every 12 hours
(3) every 6 hours
(4) every 8 hours

31. The concepts of Parliamentary Democracy and Bi-cameralism have been borrowed from which foreign constitution by the framers of the Indian Constitution ?

(1) American Constitution
(2) British Constitution
(3) Irish Constitution
(4) French Constitution

32. Who was the Chief Minister of Coorg State from the years 1952 – 1956, when Coorg was a Part 'C' State of India ?

(1) K. Malappa
(2) B.S. Kushalappa
(3) C.M. Poonacha
(4) Daya Singh Bedi

33. In which year was President's Rule imposed in Mysore State (Karnataka) for the first time ?

(1) 1969 (2) 1970
(3) 1971 (4) 1973

34. Which of the following group of states have a Bi-cameral legislature consisting of two Houses viz. Vidhana Sabha and Vidhana Parishad ?

(1) Karnataka, West Bengal, Tamil Nadu, Bihar and Maharashtra
(2) Maharashtra, Karnataka, J & K, Bihar, Uttar Pradesh and Andhra Pradesh
(3) Arunachal Pradesh, Karnataka, Maharashtra, Haryana, Jharkhand and Kerala
(4) Assam, Haryana, Maharashtra, Andhra Pradesh, Karnataka and J & K



www.kpscvaani.com

**35.** ರಾಜ್ಯ ಸಭೆಯು 2/3 ನೇ ಬಹುಮತದ ಬೆಂಬಲ ಪಡೆದ ನಿರ್ಣಯವನ್ನು 312 ನೇ ಅನುಚ್ಛೇದದ ಅನ್ವಯ ಜಾರಿಗೊಳಿಸುವ ವಿಷಯ

(1) ಕೇಂದ್ರ ಸಚಿವಾಲಯ ಸೇವೆಯನ್ನು ಸೃಷ್ಟಿಸಬಹುದು

(2) ಕೇಂದ್ರೀಯ ಸೇವೆಗಳನ್ನು ಸೃಷ್ಟಿಸಬಹುದು

(3) ಅಖಿಲಭಾರತ ಸೇವೆಯನ್ನು ಸೃಷ್ಟಿಸಬಹುದು ಮತ್ತು ಈಗಿರುವ ಅಖಿಲ ಭಾರತ ಸೇವೆಯನ್ನು ರದ್ದು ಪಡಿಸಲೂ ಬಹುದು

(4) ಒಂದು ರಾಜ್ಯದ ಕೋರಿಕೆಯ ಮೇರೆಗೆ ರಾಜ್ಯ ಸೇವೆಯನ್ನು ಸೃಷ್ಟಿಸಬಹುದು.

**36.** ಸಮ್ಮಿಶ್ರ ಸರ್ಕಾರಗಳು ಮತ್ತು ಅವುಗಳು ರಚನೆಯಾದ ವರ್ಷಗಳನ್ನು ಸರಿಹೊಂದಿಸಿ :

| | | | |
|---|---|---|---|
| A. | ಯುನೈಟೆಡ್ ಪ್ರೋಗ್ರೆಸಿವ್ ಅಲಯನ್ಸ್ | 1. | 1999 |
| B. | ನ್ಯಾಶ್‌ನಲ್ ಫ್ರಂಟ್ | 2. | 1996 |
| C. | ನ್ಯಾಶನಲ್ ಡೆಮೊಕ್ರೆಟಿಕ್ ಅಲಯನ್ಸ್ | 3. | 2004 |
| D. | ಯುನೈಟೆಡ್ ಫ್ರಂಟ್ | 4. | 1989 |

| | A | B | C | D |
|---|---|---|---|---|
| (1) | 1 | 3 | 4 | 2 |
| (2) | 3 | 4 | 1 | 2 |
| (3) | 4 | 3 | 1 | 2 |
| (4) | 4 | 3 | 2 | 1 |

**37.** ಸಂವಿಧಾನದ ಭಾಗ III ರಲ್ಲಿರುವ ಮೂಲಭೂತ ಹಕ್ಕುಗಳನ್ನು ತಿದ್ದುಪಡಿಮಾಡುವ ಅಧಿಕಾರ ಸಂಸತ್ತಿಗೆ ಇಲ್ಲ ಎಂದು ಯಾವ ಪ್ರಕರಣದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿತು ?

(1) ಗೋಲಕ್ ನಾಥ್ vs. ಪಂಜಾಬ್ ರಾಜ್ಯ 1967

(2) ಕೇಶವಾನಂದ ಭಾರತಿ vs. ಕೇರಳ ರಾಜ್ಯ 1973

(3) ಇಂದಿರಾ ಗಾಂಧಿ vs. ರಾಜ್ ನಾರಾಯಣ್ 1975

(4) ಮಿನರ್ವಾ ಮಿಲ್ಸ್ vs. ಭಾರತ ಸರ್ಕಾರ 1980

**38.** ತೊಂಬತ್ತೆರಡನೇ ಸಂವಿಧಾನ ತಿದ್ದುಪಡಿ, 2003 ರ ಮೂಲಕ ಸಂವಿಧಾನದ ಎಂಟನೇ ಅನುಸೂಚಿಗೆ ಈ ಕೆಳಗಿನ ಯಾವ ಭಾಷೆಗಳನ್ನು ಸೇರ್ಪಡೆ ಮಾಡಲಾಯಿತು ?

(1) ಸಂಥಲಿ, ಬೋಡೋ, ಕೊಂಕಣಿ ಮತ್ತು ಉರ್ದು

(2) ಬೋಡೋ, ಮಣಿಪುರಿ, ಭೋಜ್‌ಪುರಿ ಮತ್ತು ಸಂಥಲಿ.

(3) ಬೋಡೋ, ಡೋಗ್ರಿ, ಮೈಥಿಲಿ ಮತ್ತು ಸಂಥಲಿ

(4) ಕೊಂಕಣಿ, ತುಳು, ಕೊಡವ ಮತ್ತು ಭೋಜಪುರಿ.



www.kpscvaani.com

35. The Rajya Sabha by passing a resolution supported by 2/3 majority under Article 312 can

(1) create Central Secretariat Service

(2) create Central Services

(3) create an All-India Service and even abolish an existing All-India Service

(4) create State Service on a request by a State

36. Match the coalition governments with the year of their formation :

| | |
|---|---|
| A. United Progressive Alliance | 1. 1999 |
| B. National Front | 2. 1996 |
| C. National Democratic Alliance | 3. 2004 |
| D. United Front | 4. 1989 |

| | A | B | C | D |
|---|---|---|---|---|
| (1) | 1 | 3 | 4 | 2 |
| (2) | 3 | 4 | 1 | 2 |
| (3) | 4 | 3 | 1 | 2 |
| (4) | 4 | 3 | 2 | 1 |

37. In which case did the Supreme Court of India rule that the Parliament has no power to amend the Fundamental Rights as contained in Part III of the Constitution ?

(1) Golak Nath vs. State of Punjab, 1967.

(2) Keshavananda Bharathi vs. State of Kerala 1973.

(3) Indira Gandhi vs. Raj Narain 1975.

(4) Minerva Mills Ltd. vs. Union of India 1980.

38. Which of the following languages were added to the Eighth Schedule of the Constitution by the Ninety-Second Constitutional Amendment, 2003 ?

(1) Santhali, Bodo, Konkani and Urdu

(2) Bodo, Manipuri, Bhojpuri and Santhali

(3) Bodo, Dogri, Maithili and Santhali

(4) Konkani, Tulu, Kodava and Bhojpuri



www.kpscvaani.com

39. ಸಂಸತ್ತಿನ ಎರಡೂ ಸದನಗಳಿಂದ ಜಾರಿಯಾದ ಮಸೂದೆಯೊಂದಕ್ಕೆ ಭಾರತದ ರಾಷ್ಟ್ರಪತಿಯವರು ಭಾರತೀಯ ಸಂವಿಧಾನದ ಯಾವ ಅನುಚ್ಛೇದದ ಅನ್ವಯ ತಮ್ಮ ಸಮ್ಮತಿಯನ್ನು ತಡೆಹಿಡಿಯಬಹುದು ?

(1) ಅನುಚ್ಛೇದ 100

(2) ಅನುಚ್ಛೇದ 111

(3) ಅನುಚ್ಛೇದ 200

(4) ಅನುಚ್ಛೇದ 222

40. ಭಾರತದ ಉಪರಾಷ್ಟ್ರಪತಿಯವರನ್ನು ಈ ಕೆಳಕಂಡ ಮೂಲಕ ಅವರ ಸ್ಥಾನದಿಂದ ತೆಗೆದು ಹಾಕಬಹುದು

(1) ಸಚಿವ ಮಂಡಳಿಯ ಸಲಹೆಯ ಮೇರೆಗೆ ರಾಷ್ಟ್ರಪತಿಯವರು

(2) ರಾಜ್ಯಸಭೆಯ ಸದಸ್ಯರಿಂದ ಅನುಮೋದಿತವಾದ ಮತ್ತು ಅದಕ್ಕೆ ಲೋಕಸಭೆಯು ಸಮ್ಮತಿ ನೀಡಿದ ಒಂದು ರಾಜ್ಯಸಭೆಯ ನಿರ್ಣಯದ ಮೂಲಕ

(3) ರಾಷ್ಟ್ರಪತಿಯವರ ಸಮ್ಮತಿಯೊಂದಿಗೆ ಲೋಕಸಭೆ

(4) ರಾಷ್ಟ್ರಪತಿಯವರ ಸಹಮತದೊಂದಿಗೆ ರಾಜ್ಯಸಭೆ

41. ಕೇಂದ್ರ ಹಾಗೂ ರಾಜ್ಯಗಳ ಸಚಿವ ಮಂಡಳಿಯ ಸಂಖ್ಯೆಯು ಅನುಕ್ರಮವಾಗಿ ಲೋಕಸಭೆ ಹಾಗೂ ಸಂಬಂಧಪಟ್ಟ ವಿಧಾನ ಸಭೆಗಳ ಒಟ್ಟು ಸ್ಥಾನಗಳ ಸಂಖ್ಯೆಯ ಶೇಕಡಾ 15 ರಷ್ಟಿರ ಬೇಕು ಎಂದು ಈ ಕೆಳಗಿನ ಯಾವ ಸಂವಿಧಾನಿಕ ತಿದ್ದುಪಡಿಯು ನಿಗದಿಮಾಡಿದೆ ?

(1) ಎಂಬತ್ತೊಂಬತ್ತನೇ ತಿದ್ದುಪಡಿ – 2003

(2) ತೊಂಬತ್ತನೇ ತಿದ್ದುಪಡಿ – 2003

(3) ತೊಂಬತ್ತೊಂದನೇ ತಿದ್ದುಪಡಿ – 2003

(4) ತೊಂಬತ್ಮೂರನೇ ತಿದ್ದುಪಡಿ – 2005

42. ಸಂವಿಧಾನದ 120 ನೇ ಅನುಚ್ಛೇದದ ಅನ್ವಯ ಸಂಸತ್ತಿನ ಅಧಿಕೃತ ಕಲಾಪವನ್ನು ಕೆಳಕಂಡ ಭಾಷೆಯಲ್ಲಿ ಮಾತ್ರ ನಡೆಸಬೇಕು

(1) ಹಿಂದಿ ಮಾತ್ರ

(2) ಇಂಗ್ಲಿಷ್ ಮಾತ್ರ

(3) ಹಿಂದಿ ಅಥವಾ ಇಂಗ್ಲಿಷ್

(4) ಸಂವಿಧಾನದ ಎಂಟನೇ ಅನುಸೂಚಿಯಲ್ಲಿ ಪಟ್ಟಿ ಮಾಡಿರುವ ಯಾವುದೇ ಭಾಷೆ

43. ಲೋಕ ಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡಾ ಮೂವತ್ಮೂರು ಮೀಸಲಾತಿ ಒದಗಿಸುವ ಮಹಿಳಾ ಮೀಸಲಾತಿ ವಿಧೇಯಕವನ್ನು ಭಾರತದ ಯಾವ ಪ್ರಧಾನ ಮಂತ್ರಿಯವರ ಅಧಿಕಾರಾವಧಿಯಲ್ಲಿ ಮೊದಲ ಬಾರಿಗೆ ಕರಡು ರೂಪಕ್ಕೆ ತಂದು ಸಂಸತ್ತಿನಲ್ಲಿ ಮಂಡಿಸಲಾಯಿತು ?

(1) ರಾಜೀವ್ ಗಾಂಧಿ

(2) ಪಿ.ವಿ. ನರಸಿಂಹ ರಾವ್

(3) ಎಚ್.ಡಿ. ದೇವೇಗೌಡ

(4) ಅಟಲ್ ಬಿಹಾರಿ ವಾಜಪೇಯಿ

44. ಹೈದ್ರಾಬಾದ್-ಕರ್ನಾಟಕ ಪ್ರದೇಶದ ತ್ವರಿತ ಅಭಿವೃದ್ಧಿಗಾಗಿ ಭಾರತೀಯ ಸಂವಿಧಾನದ ಯಾವ ಅನುಚ್ಛೇದದ ಸೌಲಭ್ಯವನ್ನು ವಿಸ್ತರಿಸಬೇಕು ಎಂದು ಹೈದ್ರಾಬಾದ್ ಕರ್ನಾಟಕ ಹೋರಾಟಗಳ ಸಮನ್ವಯ ಸಮಿತಿಯು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದೆ ?

(1) ಅನುಚ್ಛೇದ 240

(2) ಅನುಚ್ಛೇದ 244

(3) ಅನುಚ್ಛೇದ 370

(4) ಅನುಚ್ಛೇದ 371



www.kpscvaani.com

39. The President of India can withhold his assent to a Bill passed by both Houses of Parliament under which Article of the Indian Constitution ?

(1) Article 100

(2) Article 111

(3) Article 200

(4) Article 222

40. The Vice-President of India can be removed from office by

(1) the President on the advice of the Council of Ministers

(2) a resolution of the Rajya Sabha passed by its members and agreed to by the Lok Sabha

(3) the Lok Sabha with the consent of the President

(4) the Rajya Sabha with the concurrence of the President

41. Which of the following Constitutional Amendments has prescribed the strength of the Council of Ministers in the Union as well as in the States to fifteen percent of the total number of seats in the Lok Sabha and concerned Vidhana Sabhas respectively ?

(1) Eighty-Ninth Amendment – 2003

(2) Ninetieth Amendment – 2003

(3) Ninety-First Amendment – 2003

(4) Ninety-Third Amendment – 2005

42. The official business in Parliament under Article 120 of the Constitution is to be transacted in

(1) Hindi only

(2) English only

(3) Hindi or English

(4) any language listed in the Eighth Schedule of the Constitution

43. The Women's Reservation Bill providing for thirty-three percent reservation for women in the Lok Sabha and State Assemblies was first drafted and tabled in the Parliament during the tenure of which Prime Minister of India ?

(1) Rajiv Gandhi

(2) P.V. Narasimha Rao

(3) H.D. Deve Gowda

(4) Atal Behari Vajpayee

44. The Hyderabad Karnataka Horatagala Samanvaya Samithi is urging the Central Government to extend the benefit of which Article of the Indian Constitution for the speedy development of Hyderabad – Karnataka Region ?

(1) Article 240

(2) Article 244

(3) Article 370

(4) Article 371



www.kpscvaani.com

45. ಈ ಕೆಳಗಿನ ಯಾವುದು WTO ಒಪ್ಪಂದಗಳೊಂದಿಗೆ **ಸಂಬಂಧಿಸಿಲ್ಲ** ?

(1) GATT (2) TRIPS

(3) GATS (4) WIPO.

46. ಕರ್ನಾಟಕದ ರಾಜ್ಯ ಆದಾಯವನ್ನು ಅಧಿಕೃತವಾಗಿ ಅಂದಾಜು ಮಾಡುವವರು

(1) ಕೇಂದ್ರ ಸಾಂಖ್ಯಿಕ ಸಂಸ್ಥೆ

(2) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

(3) ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಸ್ಥೆ

(4) ರಾಷ್ಟ್ರೀಯ ಸಾಂಖ್ಯಿಕ ಆಯೋಗ

47. ಶಾಸನಬದ್ಧ ಲಿಕ್ವಿಡಿಟಿ ಅನುಪಾತವನ್ನು ನಿಗದಿಸುವವರು

(1) ಭಾರತ ಸರ್ಕಾರ

(2) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

(3) ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ

(4) ಯೋಜನಾ ಆಯೋಗ

48. ಕೇಂದ್ರ ಸರ್ಕಾರದ ಆದಾಯ ಕೊರತೆ ಎಂದರೆ

(1) ಒಟ್ಟು ಆದಾಯದ ಮೇಲೆ ಒಟ್ಟು ಖರ್ಚುಗಳ ಹೆಚ್ಚುವರಿ

(2) ಒಟ್ಟು ಖರ್ಚುಗಳ ಮೇಲೆ ಆದಾಯ ಸ್ವೀಕೃತಿಗಳ ಹೆಚ್ಚುವರಿ

(3) ಆದಾಯ ಸ್ವೀಕೃತಿಗಳ ಮೇಲೆ ಆದಾಯ ಖರ್ಚುಗಳ ಹೆಚ್ಚುವರಿ

(4) ನಿವ್ವಳ ಎರವಲುಗಳಿಗೆ ಸಮಾನ

49. ಮಾರುಕಟ್ಟೆ ಬೆಲೆಗಳಲ್ಲಿ ಒಟ್ಟು ದೇಶೀಯ ಉತ್ಪನ್ನವು ಈ ಕೆಳಗಿನದನ್ನು **ಒಳಗೊಳ್ಳುವುದಿಲ್ಲ**

(1) ಪರೋಕ್ಷ ತೆರಿಗೆಗಳು

(2) ಸಬ್ಸಿಡಿಗಳು

(3) ಸವಕಳಿ

(4) ವಿದೇಶದಿಂದ ನಿವ್ವಳ ಫ್ಯಾಕ್ಟರ್ ಆದಾಯ.

50. ಪಡೆದು ಕೊಳ್ಳುವ ಬೆಲೆಗಳು ಎಂದರೆ, ಭಾರತ ಸರ್ಕಾರವು ಈ ಕೆಳಕಂಡ ಉದ್ದೇಶಕ್ಕಾಗಿ ಯಾವ ಬೆಲೆಗಳಲ್ಲಿ ಆಹಾರ ಧಾನ್ಯಗಳನ್ನು ಖರೀದಿಸುತ್ತದೋ ಅದು

(1) PDS ಅನ್ನು ಕಾಯ್ದುಕೊಳ್ಳಲು

(2) ಕಾಪು ದಾಸ್ತಾನುಗಳನ್ನು ನಿರ್ಮಿಸಲು

(3) PDS ಅನ್ನು ಕಾಯ್ದುಕೊಳ್ಳಲು ಮತ್ತು ಕಾಪು ದಾಸ್ತಾನುಗಳನ್ನು ನಿರ್ಮಿಸಲು

(4) ರಫ್ತು ಪ್ರವರ್ಧನೆ

51. 2010 – 11 ರ ಸಾಲಿನ ಕೇಂದ್ರ ಬಜೆಟ್ ಅನ್ನು ಮಂಡಿಸಿದ ದಿನಾಂಕ

(1) 28 ಫೆಬ್ರವರಿ, 2010

(2) 27 ಫೆಬ್ರವರಿ, 2010

(3) 01 ಮಾರ್ಚ, 2010

(4) 28 ಫೆಬ್ರವರಿ, 2009

52. ಭಾರತದ 11 ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿವರ್ಷಕ್ಕೆ ಗುರಿ ನಿರ್ಧಾರಿತವಾಗಿರುವ ಬೆಳವಣಿಗೆಯ ದರ

(1) ಶೇಕಡಾ 10

(2) ಶೇಕಡಾ 8

(3) ಶೇಕಡಾ 11

(4) ಶೇಕಡಾ 9

53. ಭಾರತದ ಪ್ರಧಾನ ಮಂತ್ರಿಯವರು ಈ ಕೆಳಗಿನ ಯಾವ ಸ್ಥಾನಗಳನ್ನು ಹೊಂದಿರುತ್ತಾರೆ ?

(1) ಯೋಜನಾ ಆಯೋಗದ ಅಧ್ಯಕ್ಷರು

(2) ಭಾರತದ ಏರ್‌ಪೋರ್ಟ್ ಪ್ರಾಧಿಕಾರದ ಅಧ್ಯಕ್ಷರು

(3) ಹಣಕಾಸು ಆಯೋಗದ ಅಧ್ಯಕ್ಷರು

(4) ರಾಜ್ಯ ಯೋಜನಾ ಮಂಡಳಿಗಳ ಅಧ್ಯಕ್ಷರು



www.kpscvaani.com

45. Which of the following is ***not*** associated with the WTO agreements ?

(1) GATT (2) TRIPS
(3) GATS (4) WIPO

46. State Income of Karnataka is officially estimated by

(1) Central Statistical Organisation
(2) Directorate of Economics & Statistics
(3) National Sample Survey Organisation
(4) National Statistical Commission

47. Statutory Liquidity Ratio is fixed by

(1) Government of India
(2) State Bank of India
(3) Reserve Bank of India
(4) Planning Commission

48. Revenue Deficit of the Union Government is

(1) excess of total expenditure over total revenue
(2) excess of revenue receipts over total expenditure
(3) excess of revenue expenditure over revenue receipts
(4) equal to net borrowings

49. Gross Domestic Product at market prices does ***not*** include

(1) Indirect taxes
(2) Subsidies
(3) Depreciation
(4) Net factor income from abroad

50. Procurement prices are the prices at which the Government of India purchases foodgrains for

(1) maintaining the PDS
(2) building-up buffer stocks
(3) maintaining the PDS and building-up buffer stocks
(4) export promotion

51. The Union Budget 2010 – 11 was presented on

(1) 28 February, 2010
(2) 27 February, 2010
(3) 01 March, 2010
(4) 28 February, 2009

52. The targeted rate of growth per annum in India's 11$^{th}$ Five Year Plan is

(1) 10 percent
(2) 8 percent
(3) 11 percent
(4) 9 percent

53. Which of the following positions is held by the Prime Minister of India ?

(1) Chairperson of Planning Commission
(2) Chairperson of Airport Authority of India
(3) Chairperson of Finance Commission
(4) Chairperson of State Planning Boards



www.kpscvaani.com

**54.** ವಿಶ್ವ ಅಭಿವೃದ್ಧಿ ವರದಿಯನ್ನು ಸಿದ್ಧಪಡಿಸುವವರು

(1) ವಿಶ್ವ ಆರ್ಥಿಕ ಫೋರಂ

(2) ಅಂತರರಾಷ್ಟ್ರೀಯ ಹಣಕಾಸು ನಿಧಿ

(3) ವಿಶ್ವ ಬ್ಯಾಂಕ್

(4) ವಿಶ್ವ ವ್ಯಾಪಾರ ಸಂಸ್ಥೆ

**55.** ಭಾರತದ ಸಂದಾಯಗಳ ಶಿಲ್ಕನ್ನು ಸಿದ್ಧಪಡಿಸುವವರು

(1) ಕೇಂದ್ರ ವಾಣಿಜ್ಯ ಸಚಿವ ಖಾತೆ

(2) ಕೇಂದ್ರ ಹಣಕಾಸು ಸಚಿವ ಖಾತೆ

(3) ಯೋಜನಾ ಆಯೋಗ

(4) ರಿಸ್ವರ್ವ್ ಬ್ಯಾಂಕ್ ಆಫ್ ಇಂಡಿಯಾ

**56.** ರಾಷ್ಟ್ರೀಯ ಗ್ರಾಮೀಣ ಆರೋಗ್ಯ ನಿಯೋಗ ಮಂಡಲಿ (NRHM) ಯನ್ನು ಆರಂಭಿಸಿದ ವರ್ಷ ?

(1) 2005 (2) 2000

(3) 2004 (4) 2006

**57.** ಈ ಕೆಳಗಿನ ಯಾವುದು ಭಾರತ ಸರ್ಕಾರದ ನೇರ ತೆರಿಗೆಯಾಗಿದೆ ?

(1) ಸೀಮಾ ಸುಂಕ

(2) ಅಬ್ಕಾರಿ

(3) ಸೇವಾ ತೆರಿಗೆ

(4) ಕಾರ್ಪೋರೇಶನ್ ತೆರಿಗೆ

**58.** ಬ್ರಾಡ್ ಮನಿ ಯಾವುದನ್ನು ಸೂಚಿಸುತ್ತದೆ ?

(1) $M_1$ (2) $M_2$

(3) $M_3$ (4) $M_4$

**59.** ದಿ ಜವಹರಲಾಲ್ ನೆಹರೂ ನ್ಯಾಶನಲ್ ಅರ್ಬನ್ ರಿನ್ಯೂಯಲ್ ಮಿಶನ್ ಅನ್ನು ಆರಂಭಿಸಿದ ವರ್ಷ

(1) 2004 – 05 (2) 2005 – 06

(3) 2006 – 07 (4) 2003 – 04

**60.** 2001 ರ ಜನಗಣತಿಯ ಪ್ರಕಾರ, ಕರ್ನಾಟಕದ ಲಿಂಗ ಅನುಪಾತ ಕೆಳಕಂಡಂತಿತ್ತು

(1) 960 (2) 963

(3) 965 (4) 957

**61.** ಸಗಟು ಮಾರಾಟ ಬೆಲೆ ಸೂಚಿಯ ಆಧಾರ ವರ್ಷವನ್ನು ಕೆಳಕಂಡ ವರ್ಷಕ್ಕೆ ಬದಲಾಯಿಸಲಾಗಿದೆ

(1) 2003 – 04 (2) 2000 – 01

(3) 2004 – 05 (4) 2007 – 08

**62.** ಈ ಕೆಳಗಿನ ಯಾವ ವರ್ಷವು 11 ನೇ ಪಂಚವಾರ್ಷಿಕ ಯೋಜನೆಯ ಅಂತ್ಯದ ವರ್ಷವಾಗಿದೆ ?

(1) 2011 – 12 (2) 2012 – 13

(3) 2007 – 08 (4) 2010 – 11

**63.** ಭಾರತದ ಭದ್ರತೆಗಳ ವಿನಿಮಯ ಮಂಡಳಿಯನ್ನು (SEBI) ಸ್ಥಾಪಿಸಿದ ವರ್ಷ

(1) 1988 (2) 1987

(3) 1990 (4) 1995

**64.** ಸರ್ಕಾರದ ಅಥವಾ ಸರ್ಕಾರದ ಅನುದಾನಿತ ಶಾಲೆಗಳ ಮದ್ಯಾಹ್ನದ ಬಿಸಿಯೂಟ ಯೋಜನೆಗೆ ಹಣಕಾಸಿನ ಬೆಂಬಲ ಒದಗಿಸುವವರು

(1) ಸಾಮಾಜಿಕ ನ್ಯಾಯದ ಸಚಿವ ಖಾತೆ

(2) ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಖಾತೆ

(3) ಹಣಕಾಸು ಸಚಿವ ಖಾತೆ

(4) ಶಿಕ್ಷಣ ಸಚಿವ ಖಾತೆ



www.kpscvaani.com

54. World Development Report is prepared by

(1) World Economic Forum

(2) International Monetary Fund

(3) World Bank

(4) World Trade Organisation

55. India's Balance of Payments is prepared by

(1) Union Ministry of Commerce

(2) Union Ministry of Finance

(3) Planning Commission

(4) Reserve Bank of India

56. In which year was the National Rural Health Mission (NRHM) launched ?

(1) 2005 (2) 2000

(3) 2004 (4) 2006

57. Which of the following is a direct tax of the Government of India ?

(1) Customs

(2) Excise

(3) Service tax

(4) Corporation tax

58. Broad money refers to

(1) $M_1$ (2) $M_2$

(3) $M_3$ (4) $M_4$

59. The Jawaharlal Nehru National Urban Renewal Mission was launched in

(1) 2004 – 05 (2) 2005 – 06

(3) 2006 – 07 (4) 2003 – 04

60. As per the Census 2001, the sex ratio in Karnataka was

(1) 960 (2) 963

(3) 965 (4) 957

61. The Wholesale Price Index base year has been shifted to

(1) 2003 – 04 (2) 2000 – 01

(3) 2004 – 05 (4) 2007 – 08

62. Which of the following is the terminal year of the 11th Five Year Plan ?

(1) 2011 – 12 (2) 2012 – 13

(3) 2007 – 08 (4) 2010 – 11

63. The Securities Exchange Board of India (SEBI) was set up in the year

(1) 1988 (2) 1987

(3) 1990 (4) 1995

64. Financial support to the 'Mid-Day Meals' scheme in government or government-aided schools is provided by

(1) Ministry of Social Justice

(2) Ministry of Human Resource Development

(3) Ministry of Finance

(4) Ministry of Education



www.kpscvaani.com

**65.** ಹಳದಿ ಬೆಳಕನ್ನು ಉತ್ಸರ್ಜಿಸುವ ನಕ್ಷತ್ರವೊಂದು ಭೂಮಿಯತ್ತ ವೇಗೋತ್ಕರ್ಷಿತವಾಗಿ ಬರುವಾಗ, ಭೂಮಿಯ ಮೇಲಿನಿಂದ ನೋಡಿದರೆ ಅದರ ಬಣ್ಣವು

(1) ಕ್ರಮೇಣವಾಗಿ ಕೆಂಪು ಬಣ್ಣಕ್ಕೆ ತಿರುಗುತ್ತದೆ

(2) ಕ್ರಮೇಣವಾಗಿ ನೀಲಲೋಹಿತ (ನೇರಳೆ) ಬಣ್ಣಕ್ಕೆ ತಿರುಗುತ್ತದೆ

(3) ಯಾವುದೇ ಬದಲಾವಣೆಯಾಗುವುದಿಲ್ಲ

(4) ಪ್ರಕಾಶಮಾನವಾದ ಹಳದಿ ಬಣ್ಣಕ್ಕೆ ತಿರುಗುತ್ತದೆ

**66.** ಒಬ್ಬ ವ್ಯಕ್ತಿಯು ಪ್ರತಿನಿಮಿಷಕ್ಕೆ 15 ಸಲ ಉಸಿರು ತೆಗೆದು ಕೊಳ್ಳುತ್ತಾನೆ ಪ್ರತಿಯೊಂದು ಬಾರಿ ಅತ ಉಸಿರು ತೆಗೆದುಕೊಂಡಾಗ ಅದರಲ್ಲಿರುವ ಗಾಳಿಯ ಗಾತ್ರ 450 mL ಮತ್ತು ಇದು 20% ಗಾತ್ರದಷ್ಟು ಆಮ್ಲಜನಕವನ್ನು ಹೊಂದಿರುತ್ತದೆ ಮತ್ತು ಹೊರಗೆ ಹಾಕಿದ ಗಾಳಿಯಲ್ಲಿ 16% ಗಾತ್ರದಷ್ಟು ಅಮ್ಲಜನಕ ಇರುತ್ತದೆ. ಆದ್ದರಿಂದ ಒಬ್ಬ ವ್ಯಕ್ತಿಯು ಒಂದು ದಿನಕ್ಕೆ ಒಳಗೆ ತೆಗೆದುಕೊಂಡ ಆಮ್ಲಜನಕದ ಪ್ರಮಾಣ ಸುಮಾರು

(1) 389 ಲೀಟರ್‌ಗಳು

(2) 476 ಲೀಟರ್‌ಗಳು

(3) 500 ಲೀಟರ್‌ಗಳು

(4) 300 ಲೀಟರ್‌ಗಳು

**67.** 0° C ಯಲ್ಲಿರುವ ನೀರನ್ನು 20° C ಗೆ ಕಾಯಿಸಲಾಗಿದೆ. ಆದರ ಗಾತ್ರವು

(1) ಸತತವಾಗಿ ಹೆಚ್ಚಾಗುತ್ತದೆ

(2) ಸತತವಾಗಿ ಕಡಿಮೆಯಾಗುತ್ತದೆ

(3) ಮೊದಲು ಕಡಿಮೆಯಾಗಿ ಅನಂತರ ಹೆಚ್ಚಾಗುತ್ತದೆ.

(4) ಧಾರಕದ ಗಾತ್ರವನ್ನು ಅವಲಂಬಿಸಿ ಅದು ಹೆಚ್ಚಾಗಲೂ ಬಹುದು ಅಥವಾ ಕಡಿಮೆಯೂ ಆಗಬಹುದು

**68.** ಒಂದು ಸಮತಲವಾದ ಕನ್ನಡಿಯು ನಿಮ್ಮನ್ನು 10 cm/sec ರಲ್ಲಿ ಸಮೀಪಿಸುತ್ತಿದೆ. ಇದರಲ್ಲಿ ನಿಮ್ಮ ಬಿಂಬವನ್ನು ಕಾಣಬಹುದು. ಯಾವ ವೇಗದಲ್ಲಿ ನಿಮ್ಮ ಬಿಂಬವು ನಿಮ್ಮನ್ನು ಸಮೀಪಿಸುತ್ತದೆ

(1) 10 cm/sec

(2) 5 cm/sec

(3) 20 cm/sec

(4) 15 cm/sec

**69.** ಒಬ್ಬ ವ್ಯಕ್ತಿಯು ಒಂದು ಘರ್ಷಣಾರಹಿತ ಸಮತಲ ಮೇಲ್ಮೈ ಮಧ್ಯದಲ್ಲಿ ಕುಳಿತಿದ್ದಾನೆ. ಇದರಿಂದ ಹೊರ ಬರಬೇಕಾದರೆ

(1) ಮೇಲ್ಮೈಯನ್ನು ಗಟ್ಟಿಯಾಗಿ ಒತ್ತಬೇಕು

(2) ಮೇಲ್ಮೈ ಮೇಲೆ ತೆವಳಬೇಕು

(3) ಹೊರ ನೆಗೆಯ ಬೇಕು

(4) ಆತ ಯಾವ ದಿಕ್ಕಿನೆಡೆ ಹೋಗ ಬೇಕಾಗಿದೆಯೋ ಅದರ ವಿರುದ್ಧ ದಿಕ್ಕಿಗೆ ತನ್ನ ಚೀಲವನ್ನು ಎಸೆಯಬೇಕು

**70.** ರೂ. 8,800 ಗಳ ಸಾಲವನ್ನು ಮೊದಲ ತಿಂಗಳಲ್ಲಿ ರೂ. 250 ಎರಡನೇ ತಿಂಗಳಲ್ಲಿ ರೂ. 270 ಮೂರನೇ ತಿಂಗಳಲ್ಲಿ ರೂ. 290 ರೀತಿಯಾಗಿ ತೀರಿಸುತ್ತ ಬಂದರೆ ಸಂಪೂರ್ಣವಾಗಿ ತೀರಿಸಲು ಎಷ್ಟು ಕಾಲ ಬೇಕಾಗುತ್ತದೆ

(1) 20 ತಿಂಗಳು (2) 24 ತಿಂಗಳು

(3) 18 ತಿಂಗಳು (4) 36 ತಿಂಗಳು

**71.** ಯಾವ ಇಬ್ಬರು ಹುಡುಗಿಯರೂ ಒಟ್ಟಿಗೆ ಇರದಂತೆ 5 ಹುಡುಗರು ಮತ್ತು 4 ಹುಡುಗಿಯರು ಒಂದು ಮೇಜಿನ ಸುತ್ತ ಎಷ್ಟು ವಿಧಗಳಲ್ಲಿ ಕುಳಿತುಕೊಳ್ಳಬಹುದು ?

(1) 2880 (2) 288

(3) 1440 (4) 144



www.kpscvaani.com

**65.** If a star emitting yellow light starts accelerating towards the Earth, its colour as seen from the Earth will

(1) gradually turn red

(2) gradually turn violet

(3) remain unchanged

(4) turn bright yellow

**66.** A person takes 15 breaths per minute. The volume of air inhaled in each breath is 450 mL and contains 20% of oxygen by volume and exhaled air contains 16% of oxygen by volume. Therefore, oxygen inhaled by the person in one day is approximately

(1) 389 litres

(2) 476 litres

(3) 500 litres

(4) 300 litres

**67.** Water at 0° C is heated to 20° C. Its volume

(1) increases continuously

(2) decreases continuously

(3) decreases first and then increases

(4) may increase or decrease depending on the volume of the container

**68.** A plane mirror is approaching you at 10 cm/sec. You can see your image in it. At what speed will your image approach you ?

(1) 10 cm/sec

(2) 5 cm/sec

(3) 20 cm/sec

(4) 15 cm/sec

**69.** A man is sitting in the middle of a frictionless horizontal surface. To come out he should

(1) press the surface hard

(2) crawl on the surface

(3) jump out

(4) throw his bag opposite to the direction in which he wants to go

**70.** How long will it take to pay off a debt of Rs. 8,800 if Rs. 250 is paid in the first month, Rs. 270 in the second month, Rs. 290 in the third month and so on ?

(1) 20 months (2) 24 months

(3) 18 months (4) 36 months

**71.** In how many ways can 5 boys and 4 girls sit round a table so that no two girls are together ?

(1) 2880 (2) 288

(3) 1440 (4) 144



www.kpscvaani.com

72. ಇಬ್ಬರು ವ್ಯಕ್ತಿಗಳ A ಮತ್ತು B ಅವರ ಈಗಿರುವ ವಯಸ್ಸಿನ ಅನುಪಾತ 5 : 1 ಆಗಿದೆ. 4 ವರ್ಷಗಳ ನಂತರ ಅವರ ವಯಸ್ಸಿನ ಅನುಪಾತವು 3 : 1 ಆಗುತ್ತದೆ. ಆದ್ದರಿಂದ ಅವರಿಬ್ಬರ ವಯಸ್ಸಿನ ನಡುವೆ ಇರುವ ವ್ಯತ್ಯಾಸ

(1) 16 ವರ್ಷಗಳು (2) 12 ವರ್ಷಗಳು

(3) 20 ವರ್ಷಗಳು (4) 18 ವರ್ಷಗಳು

73. ಫ್ಯೂಸ್ ತಂತಿಯನ್ನು ಯಾವುದರಿಂದ ಮಾಡಿರುತ್ತಾರೆ ?

(1) ತಾಮ್ರ

(2) ಟಂಗ್‌ಸ್ಟನ್

(3) ಸೀಸ-ತವರ ಮಿಶ್ರ ಲೋಹ

(4) ನೈಕ್ರೋಮ್

74. ಎನ್‌ಜೈಮ್‌ಗಳು (ಕಿಣ್ವಗಳು) ಎಂದರೆ

(1) ಆಹಾರದ ಶಕ್ತಿಘಟಕ

(2) ತೈಲ ಮತ್ತು ಕೊಬ್ಬುಗಳಲ್ಲಿ ಇರುತ್ತವೆ

(3) ಜೀವಶಾಸ್ತ್ರೀಯ ವೇಗವರ್ಧಕಗಳು

(4) ಜ್ವರವನ್ನು ನಿಯಂತ್ರಿಸುವ ಔಷಧಗಳು

75. ಸೋಪ್ ತಯಾರಿಸುವಲ್ಲಿ ಪ್ರಮುಖವಾಗಿ ಉಪಯೋಗಿಸಲ್ಪಡುವ ಕಚ್ಚಾ ವಸ್ತು

(1) ಸೋಪಿನ ಕಲ್ಲು

(2) ಎಣ್ಣೆ

(3) ಲಿಂಬೆ ರಸ

(4) ಸುಗಂಧ ದ್ರವ

76. ಕೈಗಾರಿಕಾ ಉದ್ದೇಶಗಳ ಆಲ್ಕೋಹಾಲ್‌ಗೆ ಈ ಕೆಳಕಂಡದ್ದನ್ನು 5% ನಷ್ಟು ಸೇರಿಸುವ ಮೂಲಕ ಮಾನವ ಸೇವನೆಗೆ ಅನರ್ಹವಾಗುವಂತೆ ಮಾಡಲಾಗುತ್ತದೆ

(1) ಹೈಡ್ರೋಕ್ಲೋರಿಕ್ ಆಮ್ಲ

(2) ಸೋಡಿಯಂ ಕ್ಲೋರೈಡ್

(3) ಮೀಥೈಲ್ ಆಲ್ಕೊಹಾಲ್

(4) ಇಥೆನಾಲ್

77. ಆಹಾರದ ಪಿಷ್ಟ ಪದಾರ್ಥದಲ್ಲಿರುವ ಪ್ರಧಾನವಾದ ಶಕ್ತಿ ಘಟಕ ಯಾವುದು ?

(1) ಪ್ರೋಟೀನ್

(2) ಜೀವಸತ್ವ

(3) ಗ್ಲಿಸರೈಡ್‌ಗಳು

(4) ಕಾರ್ಬೋಹೈಡ್ರೇಟ್‌ಗಳು

78. ಚಾರಿತ್ರಿಕವಾಗಿ, ಅತ್ಯಂತ ಪರಿಶುದ್ಧ ಗುಣಹೊಂದಿರುವ ವಾಣಿಜ್ಯ ಕಬ್ಬಿಣದ ರೂಪ

(1) ನಾಡು ಕಬ್ಬಿಣ

(2) ಎರಕ ಹೊಯ್ದ ಕಬ್ಬಿಣ

(3) ಉಕ್ಕು

(4) ಬೀಡು ಕಬ್ಬಿಣ

79. ಜೀವಕೋಶದ ಶಕ್ತಿ ಗೃಹ ಯಾವುದು ?

(1) ಮೈಟೋಕಾಂಡ್ರಿಯಾ

(2) ಲೈಸೋಸೋಮ್

(3) ರೈಬೋಸೋಮ್

(4) ಗಾಲ್ಗಿ ಸಂಕೀರ್ಣ

80. HIV ಯು ಈ ಕೆಳಕಂಡ ಮೂಲಕ ದೇಹದ ಸ್ವಾಭಾವಿಕ ರೋಗ ನಿರೋಧಕ ಶಕ್ತಿಯನ್ನು ಕಡಿಮೆ ಮಾಡುತ್ತದೆ

(1) ಕೆಂಪು ರಕ್ತಕಣಗಳನ್ನು ನಾಶಮಾಡುವ ಮೂಲಕ

(2) ಪ್ರತಿಕಾಯ (antibodies) ಗಳನ್ನು ನಾಶಮಾಡುವ ಮೂಲಕ

(3) T-ಲಿಂಪೋಸೈಟ್‌ಗಳ ಮೇಲೆ ದಾಳಿ ಮಾಡುವ ಮೂಲಕ

(4) B-ಲಿಂಪೋಸೈಟಗಳ ಮೇಲೆ ದಾಳಿಮಾಡುವ ಮೂಲಕ



www.kpscvaani.com

72. The ratio of the present ages of two persons A and B is 5 : 1. After 4 years, the ratio of their ages becomes 3 : 1. Therefore, the difference in their ages is

(1) 16 years (2) 12 years

(3) 20 years (4) 18 years

73. The fuse wire is made of

(1) Copper

(2) Tungsten

(3) Lead-tin alloy

(4) Nichrome

74. Enzymes are

(1) energy component of food

(2) present in oils and fats

(3) biological catalysts

(4) medicines to control fever

75. The chief raw material required for making soap is

(1) soapstone

(2) oil

(3) lemon juice

(4) perfume

76. Alcohol for industrial purpose is made unfit for human consumption by addition of 5%

(1) Hydrochloric acid

(2) Sodium chloride

(3) Methyl alcohol

(4) Ethanol

77. The main energy component present in starch of food is the

(1) Protein

(2) Vitamin

(3) Glycerides

(4) Carbohydrates

78. Historically, the commercial form of iron that is purest in nature is

(1) wrought iron

(2) cast iron

(3) steel

(4) pig iron

79. The powerhouse of the cell is

(1) Mitochondria

(2) Lysosome

(3) Ribosome

(4) Golgi complex

80. HIV decreases natural immunity of the body by

(1) destroying erythrocytes

(2) destroying antibodies

(3) attacking T-lymphocytes

(4) attacking B-lymphocytes



www.kpscvaani.com

81. ಬಿಳಿಗಿರಿ ರಂಗಸ್ವಾಮಿ ರಾಷ್ಟ್ರೀಯ ಉದ್ಯಾನದಲ್ಲಿ ರಕ್ಷಿಸಲಾಗಿರುವ ಪ್ರಾಣಿ ಪ್ರಭೇದ ಯಾವುದು ?

(1) ಹುಲಿ

(2) ವಿವಿಧ ಪ್ರಭೇದಗಳ ಹಕ್ಕಿಗಳು

(3) ಆನೆ

(4) ಸಿಂಹ

82. ಸಸ್ತನಿಗಳಲ್ಲಿ ಬೆವರಿನ ಉತ್ಪಾದನೆ/ಬೆವರು ಗ್ರಂಥಿಗಳ ಮೂಲ ಉದ್ದೇಶ

(1) ಹೆಚ್ಚುವರಿ ನೀರನ್ನು ತೆಗೆದು ಹಾಕುವುದು

(2) ದೇಹದ ಉಷ್ಣಾಂಶದ ನಿಯಂತ್ರಣ

(3) ಹೆಚ್ಚುವರಿ ಉಪ್ಪನ್ನ ತೆಗೆದು ಹಾಕುವುದು

(4) ಚರ್ಮದ ಮೇಲಿನ ಬ್ಯಾಕ್ಟೀರಿಯಾಗಳನ್ನು ಕೊಲ್ಲುವುದು

83. Red data book ಯಾವುದಕ್ಕೆ ಸಂಬಂಧಿಸಿದೆ ?

(1) ಸ್ಥಳೀಯ ರೋಗದ ಸಸ್ಯಗಳು ಹಾಗೂ ಪ್ರಾಣಿಗಳು

(2) ನಶಿಸಿ ಹೋದ ಸಸ್ಯಗಳು ಹಾಗೂ ಪ್ರಾಣಿಗಳು

(3) ಪ್ರಕಾಶಾವಧಿ ಸ್ಪಂದನ ಸಾಮರ್ಥ್ಯ ತೋರಿಸುವ ಸಸ್ಯಗಳು ಮತ್ತು ಪ್ರಾಣಿಗಳು

(4) ಅಳಿವಿನ ಅಂಚಿನಲ್ಲಿರುವ ಸಸ್ಯಗಳು ಮತ್ತು ಪ್ರಾಣಿಗಳು

84. ಒಂದು ವೃಕ್ಷದ ಹಳೆಯ ಕಾಂಡವನ್ನು ಅಡ್ಡಡ್ಡವಾಗಿ ಕತ್ತರಿಸಿದಾಗ ದ್ವಿತೀಯ ದಾರುವಿನ (secondary wood) ಹೊರ ವಲಯವು ತಿಳಿಯಾದ ಬಣ್ಣದಲ್ಲಿರುವುದು ಕಂಡುಬರುತ್ತದೆ ದಾರುವಿನ ಈ ವಲಯವನ್ನು ಏನೆಂದು ಕರೆಯುತ್ತಾರೆ

(1) ಕಾಂಡದ ಮಧ್ಯ ಭಾಗ (Heart wood)

(2) ಕಾಂಡದ ಹೊರ ಭಾಗ (Sap wood)

(3) ವಸಂತ ಕಾಲ ಕಾಂಡ (Spring wood)

(4) ಶರತ್ ಕಾಲ ಕಾಂಡ (Autumn wood)

